**ಪಾಠ–13** **ಮಾರ್ಚ್ 21–27**

# ಧೂಳಿನಿಂದ ನಕ್ಷತ್ರಗಳೆಡೆಗೆ



**ಸಬ್ಬತ್ತು ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ದಾನಿ 12; ರೋಮ 8:34; ಲೂಕ 10:20; ರೋಮ 8:18; ಇಬ್ರಿಯ 2:14, 15; ಯೋಹಾನ 14:29, ಪ್ರಕ 11:3.

**ಸ್ಮರಣವಾಕ್ಯ : "ಜ್ಞಾನಿಗಳ ತೇಜೋಮಯವಾದ ಆಕಾಶಮಂಡಲದಂತೆ ಪ್ರಕಾಶಿಸುವರು; ಬಹುಜನರನ್ನು ಸದ್ಧರ್ಮಿಗಳನ್ನಾಗಿ ಮಾಡುವರು. ಯುಗಯುಗಾಂತರಗಳಲ್ಲಿಯೂ ನಕ್ಷತ್ರಗಳ ಹಾಗೆ ಹೊಳೆಯುವರು"** (ದಾನಿಯೇಲ 12:3).

ದಾನಿಯೇಲನ ಪುಸ್ತಕವು ನೆಬೂಕದ್ನೆಚ್ಚರನು ಯೂದಾಯ ದೇಶದ ಮೇಲೆ ದಂಡೆತ್ತಿ ಬಂದು ಬ್ಯಾಬಿಲೋನಿಗೆ ಸೆರೆಯಾಳುಗಳನ್ನು ಒಯ್ಯುವುದರೊಂದಿಗೆ ಆರಂಭವಾಗಿ ಮೀಕಾಯೇಲನು ದೇವಜನರನ್ನು ಅಂತ್ಯಕಾಲದ ಬ್ಯಾಬಿಲೋನಿನಿಂದ ಬಿಡಿಸುವುದಕ್ಕಾಗಿ ಏಳುತ್ತಾನೆ ಎಂಬಲ್ಲಿಗೆ ಮುಕ್ತಾಯವಾಗುತ್ತದೆ. ದಾನಿಯೇಲನ ಪುಸ್ತಕದಾದ್ಯಂತ ತೋರಿಸಿರುವಂತೆ ಕಡೆಯಲ್ಲಿ ಕಟ್ಟಕಡೆಯಲ್ಲಿ ದೇವರು ಎಲ್ಲವೂ ತನ್ನ ಜನರಿಗೆ ಅನುಕೂಲಿಸುವಂತೆ ಕಾರ್ಯಮಾಡುತ್ತಾನೆ.

ನಾವು ನೋಡಿದಂತೆ ದಾನಿಯೇಲ ಮತ್ತು ಆತನ ಸ್ನೇಹಿತರು ಗಡಿಪಾರಾದ ದೇಶದಲ್ಲಿ ಎಲ್ಲಾ ಕಷ್ಟಸಂಕಟಗಳು, ಸವಾಲುಗಳ ನಡುವೆಯೂ ದೇವರಿಗೆ

ನಂಬಿಗಸ್ತರಾಗಿ ನಡೆದು ಅಸಾಧಾರಣವಾದ ಬುದ್ಧಿಯನ್ನು ತೋರಿಸಿದರು. ಹಾಗೆಯೇ, ಅಂತ್ಯಕಾಲದಲ್ಲಿ ಜೀವಿಸುವ ದೇವಜನರು ಕಷ್ಟಸಂಕಟಗಳನ್ನು ಎದುರಿಸುವಾಗ ವಿಶೇಷವಾಗಿ ಮೊಟ್ಟಮೊದಲ ಜನಾಂಗವು ಉಂಟಾದಂದಿನಿಂದ ಅಂದಿನವರೆಗೆ ಸಂಭವಿಸದಂಥ ಸಂಕಟವು ಸಂಭವಿಸುವಾಗ ನಂಬಿಗಸ್ತರಾಗಿ ಉಳಿಯುತ್ತಾರೆ (ದಾನಿ 12:1). ದಾನಿಯೇಲ ಮತ್ತು ಆತನ ಸ್ನೇಹಿತರು ಬ್ಯಾಬಿಲೋನ್ ಸಂಸ್ಥಾನದಲ್ಲಿ ಜ್ಞಾನವಿವೇಕಗಳನ್ನು ತೋರಿಸಿದಂತೆ ಅವರೂ ತೋರಿಸುತ್ತಾರೆ. ಅವರು ಜ್ಞಾನ ತಿಳುವಳಿಕೆಯನ್ನು ವೈಯಕ್ತಿಕ ಗುಣಗಳೆಂದು ಅನುಭವಿಸದೆ ನಿಷ್ಠಾವಂತರಾಗಿರುತ್ತಾರೆ. ಆ ಜ್ಞಾನದ (ವಿವೇಕದ) ತತ್ಪರಿಣಾಮವಾಗಿ ಇತರರನ್ನು ನೀತಿಗೆ ನಡೆಸುತ್ತಾರೆ. ಕೆಲವರು ಸಾಯುತ್ತಾರೆ, ಕೆಲವರು ಮರಣಕ್ಕೆ ಒಪ್ಪಿಸಲ್ಪಡುತ್ತಾರೆ ಮತ್ತೆ ಧೂಳಿಗೆ ಹೋಗುತ್ತಾರೆ. ಆದರೆ ಅವರು ನಿತ್ಯತ್ವ ಹೊಂದಲು ಎಬ್ಬಿಸಲ್ಪಡುತ್ತಾರೆ. ಸತ್ಯವೇದದ ವಚನವು ಹೇಳುವಂತೆ, "ಧೂಳಿನ ನೆಲದೊಳಗೆ ದೀರ್ಘನಿದ್ರೆ ಮಾಡುವವರಲ್ಲಿ ಅನೇಕರು ಹೆಚ್ಚತ್ತು ಕೆಲವರು ನಿತ್ಯಜೀವವನ್ನು ಕೆಲವರು ನಿಂದನ ನಿತ್ಯತಿರಸ್ಕಾರಗಳನ್ನು ಅನುಭವಿಸುವರು" (ದಾನಿ 12:2).

ಈ ವಾರದ ಪಾಠವನ್ನು ದಿನಾಂಕ 28.03.2020ರ ಸಬ್ಬತ್ತಿಗೆ ಸಿದ್ಧಪಡಿಸಿಕೊಳ್ಳಿರಿ.

**ಭಾನುವಾರ** **ಮಾರ್ಚ್ 22**

## ಮೀಕಾಯೇಲ ನಮ್ಮ ಮಹಾಪಾಲಕ

ಓದಿರಿ : ದಾನಿಯೇಲ 12:1. ಕಡೆಯ ಕಾಲದಲ್ಲಿ ಚರಿತ್ರೆಯ ಓಟವನ್ನು ಯಾರು ಬದಲಿಸುತ್ತಾರೆ? ಹೇಗೆ ರೋಮ 8:34 ಮತ್ತು ಇಬ್ರಿಯ 7:25 ಮೇಲಿನ ವಚನವನ್ನು ಅರ್ಥಮಾಡಿಕೊಳ್ಳಲು ಸಹಾಯಮಾಡುತ್ತವೆ?

ಇದುವರೆಗೆ ದಾನಿಯೇಲನ ಪುಸ್ತಕದ ಪ್ರತೀ ಅಧ್ಯಾಯಗಳು ಅನ್ಯಧರ್ಮೀಯ ಅರಸರ ಪ್ರಸ್ತಾಪನೆಯೊಂದಿಗೆ ಆರಂಭಗೊಂಡವು. ಹಾಗೆಯೇ ದಾನಿಯೇಲ 12ನೇ ಅಧ್ಯಾಯುವೂ ಸಹಾ ಒಬ್ಬ ಅರಸನ ಪ್ರಸ್ತಾಪನೆಯಿಂದಲೇ ಆರಂಭವಾಗುತ್ತದೆ, ಆದರೆ ಈ ಅರಸನು ಪ್ರತೀ ಅಧ್ಯಾಯಗಳಲ್ಲಿ ಉಲ್ಲೇಖಿತವಾದ ಅರಸರಂತಿರದೆ ಈತನು ದೈವೀಕ ಪ್ರಭುವಾಗಿದ್ದು, ದೇವಜನರನ್ನು ಅವರ

ವೈರಿಗಳ ಕೈಯಿಂದ ಬಿಡಿಸುವುದಕ್ಕಾಗಿ ಏಳುತ್ತಾನೆ.

ದಾನಿಯೇಲ 10ನೇ ಅಧ್ಯಾಯವನ್ನು ಅಧ್ಯಯನ ಮಾಡುವಾಗ ಕಂಡಂತೆ ದಾನಿಯೇಲನಿಗೆ ಟೈಗ್ರಿಸ್ ನದಿಯ ದಡದಲ್ಲಿ ಕಾಣಿಸಿಕೊಂಡ ಪರಲೋಕ ನಿವಾಸಿಯು ಈ ಮೀಕಯೇಲನಾಗಿದ್ದಾನೆ. ಅಲ್ಲಿ ಆತನು ದೇವಜನರನ್ನು ಪ್ರತಿನಿಧಿಸುವವನಾಗಿ ಹೊರಹೊಮ್ಮುತ್ತಾನೆ. ಈತನು ದಾನಿಯೇಲನ ಪುಸ್ತಕದಲ್ಲಿ ಕೆಲವು ಕಡೆ ಮನುಷ್ಯಕುಮಾರನಾಗಿ ಕಾಣಿಸಿಕೊಳ್ಳುತ್ತಾನೆ (ದಾನಿಯೇಲ 7ನೇ ಅಧ್ಯಾಯ), ಸೈನ್ಯಗಳ ಪ್ರಭುವಾಗಿ (ದಾನಿಯೇಲ 8ನೇ ಅಧ್ಯಾಯ), ಅಭಿಷಿಕ್ತನಾದ ಪ್ರಭುವಾಗಿ (ದಾನಿ 9ನೇ ಅಧ್ಯಾಯ) ಕಾಣಿಸಿಕೊಳ್ಳುತ್ತಾನೆ. ಈ ಮೀಕಾಯೇಲನು ಬೇರೆ ಯಾರೂ ಆಗಿರದೆ ಸ್ವತಃ ಯೇಸುಕ್ರಿಸ್ತನೇ ಆಗಿದ್ದಾನೆ.

ಈವಾಗ ಮೀಕಾಯೇಲನ ಮಧ್ಯಸ್ಥಿಕೆಯ ಕಾಲವನ್ನು ಗಮನಿಸುವುದು ಬಹಳ ಮುಖ್ಯವಾದುದಾಗಿದೆ. ದಾನಿಯೇಲ 12:1ರ ಪ್ರಕಾರ 'ಆ ಕಾಲದಲ್ಲಿ' ಎಂಬ ಉಕ್ತಿಯು ದಾನಿಯೆಲ 11:40–45 ವಚನಗಳಲ್ಲಿ ನಡೆಯುವ ಘಟನೆಗಳ ಕಾಲಕ್ಕೆ ಅನ್ವಯಿಸುತ್ತದೆ. ಈ ಅವಧಿಯ ಆರಂಭವು ಕ್ರಿ.ಶ. 1798ರಲ್ಲಿ ಪೋಪನು ಸೆರೆಯಾದ ವರ್ಷದಿಂದ ಹಿಡಿದು ಅಂತ್ಯಕಾಲದಲ್ಲಿ ಪುನರುತ್ಥಾನವಾಗುವ ಕಾಲದವರೆಗೆ ವಿಸ್ತರಿಸುತ್ತದೆ (ದಾನಿಯೇಲ 12:2).

ಮೀಕಾಯೇಲನು ಮಾಡುವ ಕೆಲಸದಲ್ಲಿ ಎರಡು ಮುಖ್ಯವಾದ ಅಂಶಗಳನ್ನು ದಾನಿ 12:1ರಲ್ಲಿ 'ಏಳುವನು' ಎಂಬ ಕ್ರಿಯಾಪದದಿಂದ ಊಹಿಸಿಕೊಂಡು ಅವನ ಕಾರ್ಯಗಳನ್ನು ವಿವರಿಸಬಹುದು. ಮೊದಲನೆಯದು, ಏಳು ಎಂಬ ಕ್ರಿಯಾಪದವು ಎದ್ದು ಯುದ್ಧಗಳನ್ನು ಗೆದ್ದು ಆಳ್ವಿಕೆ ಮಾಡುವಂತೆ ರಾಜರನ್ನು ಪ್ರಚೋದಿಸುತ್ತದೆ.

ಈ ಕ್ರಿಯಾಪದವು ಪ್ರಾಥಮಿಕವಾಗಿ ಸೈನ್ಯಪ್ರಜ್ಞೆಯನ್ನು ಸೂಚಿಸುತ್ತದೆ. ಮೀಕಾಯೇಲನು ಸೇನಾಪತಿಯಂತೆ ತನ್ನ ಜನರನ್ನು ಸಂರಕ್ಷಿಸಿ ಮಹಾಹೋರಾಟದ ಕಡೆಯ ಹಂತಗಳಲ್ಲಿ ಅವರನ್ನು ವಿಶೇಷವಾದ ರೀತಿಯಲ್ಲಿ ನಡೆಸುವುದನ್ನು ತೋರಿಸುತ್ತದೆ. ಎರಡನೆಯದು, 'ಏಳು' ಎಂಬ ಕ್ರಿಯಾಪದವು

ನ್ಯಾಯವಿಚಾರಣೆಯ ದೃಶ್ಯವನು ಸೂಚಿಸುತ್ತದೆ. ಮೀಕಾಯೇಲನು ಪರಲೋಕದ ನ್ಯಾಯಪೀಠದಲ್ಲಿ ವಕೀಲನಂತೆ ಕಾರ್ಯನಿರ್ವಹಿಸಲು ಏಳುತ್ತಾನೆ. ಆತನು ಮನುಷ್ಯಕುಮಾರನಾಗಿ ವಿಚಾರಣಾಯುಕ್ತವಾದ ನ್ಯಾಯವಿಚಾರಣೆಯಲ್ಲಿ ದೇವಜನರನ್ನು ಪ್ರತಿನಿಧಿಸುವುದಕ್ಕೆ ಮಹಾವೃದ್ಧನನ್ನು ಸಮೀಪಿಸುತ್ತಾನೆ (ದಾನಿ 7:9–14). ಹಾಗಾಗಿ ಮೀಕಾಯೇಲನ ಏಳುವಿಕೆ ಅಥವಾ ನಿಲ್ಲುವಿಕೆ ಆತನು ನಿರ್ವಹಿಸುವ ಕಾರ್ಯದ ಸೇನೆ ಮತ್ತು ನ್ಯಾಯಾಲಯಗಳ ಅಂಶಗಳನ್ನು ಪ್ರತಿನಿಧಿಸುತ್ತದೆ.

ಮೀಕಾಯೇಲನು ಯಾವಾಗಲೂ ನಮಗೋಸ್ಕರ ನಿಂತಿದ್ದಾನೆ ಎಂಬುದು ಏನು ಅರ್ಥಕೊಡುತ್ತದೆ ಆಲೋಚಿಸಿರಿ. ಇದು ಪಾಪಿಯಾದ ನಿಮಗೆ ಯಾವ ನಿರೀಕ್ಷೆಯನ್ನು ಕೊಡುತ್ತದೆ?

**ಸೋಮವಾರ** **ಮಾರ್ಚ್ 23**

## ಜೀವಬಾಧ್ಯರ ಪಟ್ಟಿಯಲ್ಲಿ ಬರೆಯಲ್ಪಟ್ಟ

ದಾನಿಯೇಲ 12:1 ಯಾರ ಹೆಸರುಗಳು ಜೀವಬಾಧ್ಯರ ಪಟ್ಟಿಯಲ್ಲಿ ಸಿಕ್ಕುವವೋ ಅವರ ಬಗ್ಗೆ ಮಾತಾಡುತ್ತದೆ. ಹಾಗೆಂದರೆ ಏನು ಅರ್ಥ?

ಮೀಕಾಯೇಲನು ಮಧ್ಯಸ್ತಿಕೆ ವಹಿಸುವ ಕಾಲವನ್ನು ಎಣೆಯಿಲ್ಲದ ಸಂಕಟಗಳ ಕಾಲವೆಂದು ವಿವರಿಸಲಾಗಿದೆ. ದೇವರು ಎದುರು ಬೀಳುವ ಜನರಿಂದ ತನ್ನ ಆತ್ಮನನ್ನು ಹಿಂದೆ ತೆಗೆದುಕೊಳ್ಳುವ ಕಾಲಕ್ಕೆ ಅನುಗುಣವಾಗಿದೆ. ನಂತರ ಕಡೆಯ ಏಳು ಉಪದ್ರವಗಳು ಜನಾಂಗದ ಮೇಲೆ ಪ್ರಕಟವಾಗುವ ದೇವರ ಕೋಪವು ಅಂತ್ಯಕಾಲದ ಬ್ಯಾಬಿಲೋನಿನ ಮೇಲೆ ಸುರಿಸಲ್ಪಡುವುದು (ಪ್ರಕ 16:18–20–21) ಮತ್ತು ಅಂಧಕಾರಶಕ್ತಿಗಳನ್ನು ಲೋಕದ ಮೇಲೆ ಬಿಡಲಾಗುವುದು. ಎಲೆನ್ ಜಿ ವೈಟಮ್ಮನವರು ಈ ಕಾಲದ ಬಗ್ಗೆ "ಸೈತಾನನು ಭೂಲೋಕದ ನಿವಾಸಿಗಳನ್ನು ಬಂದು ದೊಡ್ಡ ಸಂಕಟದಲ್ಲಿ ಮುಳುಗಿಸುತ್ತಾನೆ. ದೇವದೂತರು ಮನುಷ್ಯನ ಆಸೆಯ ಬಿರುಗಾಳಿಯನ್ನು ತಡೆಯುವುದನ್ನು ನಿಲ್ಲಿಸಿ ಬಿಟ್ಟಾಗ ಹೋರಾಟದ ಎಲ್ಲಾ ಅಂಶಗಳನ್ನು ಬಿಚ್ಚಿ ಬಿಡಲಾಗುತ್ತದೆ. ಆವಾಗ ಇಡಿಲೋಕವೇ ವಿನಾಶದಲ್ಲಿ ತೊಡಗಿಕೊಂಡಿರುತ್ತದೆ.

ಇದು ಹಳೆಯ ಕಾಲದಲ್ಲಿ ಯೆರೂಸಲೇಮಿನ ಮೇಲೆ ಬಂದ ನಾಶನಕ್ಕಿಂತಲೂ ಭಯಾನಕವಾಗಿರುತ್ತದೆ" ಎಂದು ಹೇಳುತ್ತಾರೆ– ಮಹಾಹೋರಾಟ, ಪುಟ 614.

ಆದರೆ ದೇವಜನರು ಮಹಾಸಂಕಟದಿಂದ ಬಿಡುಗಡೆ ಹೊಂದುತ್ತಾರೆ. ಯಾಕೆಂದರೆ ಪರಲೋಕದ ನ್ಯಾಯಪೀಠದಲ್ಲಿ ಇವರಿಗೆ ನ್ಯಾಯವಿಚಾರಣೆ ನಡೆಯುವಾಗ ಅವರು ಮಹಾಯಾಜಕನಾದ ಯೇಸುಕ್ರಿಸ್ತನಿಂದ ಎತ್ತಿಹಿಡಿಯಲ್ಪಟ್ಟ ಕಾರಣ ಅವರ ಹೆಸರುಗಳು ಜೀವಬಾಧ್ಯರ ಪುಸ್ತಕದಲ್ಲಿ ಬರೆಯಲ್ಪಟ್ಟವು.

ಈ ಪುಸ್ತಕದ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಪಡೆದುಕೊಳ್ಳಲು ಸತ್ಯವೇದವು ಹೆಸರಿಸಿರುವ ಎರಡು ವಿಧದ ಪರಲೋಕ ಪುಸ್ತಕಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಒಂದು ಪುಸ್ತಕದಲ್ಲಿ ಯೇಸುಕ್ರಿಸ್ತನ ಜನರ ಹೆಸರುಗಳನ್ನು ಹೊಂದಿರುತ್ತದೆ. ಈ ಪುಸ್ತಕಕ್ಕೆ ಜೀವಿತರ ಪಟ್ಟಿ ಎಂಬ ಹೆಸರಿದೆ (ವಿ.ಕಾಂಡ 32:32, ಲೂಕ 10:20, ಕೀರ್ತನೆಗಳು 69:28, ಫಿಲಿ 4:3, ಪ್ರಕ 17:8).

ಜೀವಬಾಧ್ಯರ ಪಟ್ಟಿಯ ಜೊತೆಗೆ ಸತ್ಯವೇದವು ಮಾನವರ ಕೃತ್ಯಗಳನ್ನು ದಾಖಲೆಯನ್ನು ಹೊಂದಿರುವ ಪುಸ್ತಕದ ಬಗ್ಗೆ ಹೇಳುತ್ತದೆ (ಕೀರ್ತಿ 56:8, ಮಲಾಕಿ 3:16, ಯೆಶಾಯ 65:6). ಪ್ರತಿ ಮನುಷ್ಯನು ದೇವರ ಮೇಲೆ ಇಟ್ಟಿರುವ ಬದ್ಧತೆಯನ್ನು ನಿರ್ಧರಿಸಲು ಈ ಪುಸ್ತಕಗಳನ್ನು ತಾನೆ ಪರಲೋಕದ ನ್ಯಾಯಪೀಠದಲ್ಲಿ ಉಪಯೋಗಿಸಲಾಗುತ್ತದೆ. ಇವುಗಳು ಪರಲೋಕದ ದಾಖಲೆಗಳು ಗಣಕಯಂತ್ರದಲ್ಲಿ ಶೇಖರಿಸಲ್ಪಟ್ಟ ದತ್ತಗಳಂತೆ ಪ್ರತಿ ಮನುಷ್ಯನ ಹೆಸರುಗಳು ಮತ್ತು ಕೃತ್ಯಗಳು ಬರೆಯಲ್ಪಟ್ಟಿರುತ್ತವೆ. ಕೆಲವರು ತಮ್ಮ ಹೆಸರುಗಳು ಅದರಲ್ಲೂ ಅವರ ಕೃತ್ಯಗಳು ಪರಲೋಕದಲ್ಲಿ ಬರೆಯಲ್ಪಟ್ಟಿವೆ ಎಂಬ ಆಲೋಚನೆಗಳಿಂದ ಮುಖ ಸಿಂಡರಿಸಿಕೊಳ್ಳುತ್ತಾರೆ. ಆದರೆ ಒಮ್ಮೆ ನಾವು ಕ್ರಿಸ್ತನ ವಶಕ್ಕೆ ನಮ್ಮ ಜೀವಿತಕ್ಕೆ ಒಪ್ಪಿಸಿಕೊಟ್ಟರೆ ನಮ್ಮ ಹೆಸರುಗಳು ಜೀವಬಾಧ್ಯರ ಪುಸ್ತಕದಲ್ಲಿ ಬರೆಯಲ್ಪಡುತ್ತವೆ ಮತ್ತು ನಮ್ಮ ಎಲ್ಲಾ ಕೆಟ್ಟಕಾರ್ಯಗಳು ನ್ಯಾಯತೀರ್ಪಿನಲ್ಲಿ ಅಳಿಸಲ್ಪಡುತ್ತವೆ. ಪರಲೋಕದ ಈ ದಾಖಲಾತಿ ನ್ಯಾಯಾಲಯದ ತೀರ್ಪಿಗೆ ಇಡೀ ವಿಶ್ವದ ಪುರಾವೆಗಳನ್ನು ಒದಗಿಸಿಕೊಡುತ್ತದೆ. ನಾವು ಯೇಸುಕ್ರಿಸ್ತನಿಗೆ ಸೇರಿದವರಾಗಿದ್ದು, ಸಂಕಟ ಕಾಲದಲ್ಲಿ ರಕ್ಷಿಸಲ್ಪಡುವುದಕ್ಕೆ

ಹಕ್ಕುಳ್ಳವರಾಗಿರುತ್ತೇವೆ. ನಮ್ಮ ಹೆಸರುಗಳು ಜೀವಬಾಧ್ಯರ ಪಟ್ಟಿಯಲ್ಲಿ ಸಿಗುವುದಕ್ಕೆ ನಮಗೆ ಕೊಡಲ್ಪಟ್ಟಿರುವ ಯೇಸುಕ್ರಿಸ್ತನ ನೀತಿಯು ಮಾತ್ರ ನಿರೀಕ್ಷೆ ತರುತ್ತದೆ, ಯಾಕೆ?

**ಮಂಗಳವಾರ** **ಮಾರ್ಚ್ 24**

## ಪುನರುತ್ಥಾನ

ಓದಿರಿ : ದಾನಿಯೇಲ 12:2,3. ಇಲ್ಲಿ ಯಾವ ಘಟನೆಯ ಬಗ್ಗೆ ಅವನು ಮಾತಾಡುತ್ತಿದ್ದಾನೆ ಮತ್ತು ಯಾಕೆ ಮರಣದ ವಿಷಯದಲ್ಲಿ ನಮಗೆ ಯಾವ ತಿಳುವಳಿಕೆ ಇದೆಯೋ ಅದನ್ನು ಪರಿಗಣಿಸಿದಾಗ ಈ ಘಟನೆಯು ನಮಗೆ ಬಹಳ ಮುಖ್ಯವಾದುದೆ?

ದಾನಿಯೇಲನು ಬರುತ್ತಿರುವ ಪುನರುತ್ಥಾನಕ್ಕೆ ಬಹುಶಃ ಅತ್ಯಂತ ವಿಶದವಾದ ಉಲ್ಲೇಖವನ್ನು ಹಳೆಯ ಒಡಂಬಡಿಕೆಯಲ್ಲಿ ಮಾಡಿದ್ದಾನೆ. ಈ ಉಲ್ಲೇಖದ ಬಗ್ಗೆ ಆಲೋಚಿಸುವಾಗ ನಾವು ಬಹಳ ಮುಖ್ಯವಾಗಿ ಕೆಲವು ಸತ್ಯಗಳನ್ನು ಕಲಿಯಬಹುದು. ಮೊದಲನೆಯದು 'ನಿದ್ರೆ'ಯ ರೂಪಕವು ಅಮರತ್ವವುಳ್ಳ ಆತ್ಮವು ನಮ್ಮ ದೇಹಗಳಲ್ಲಿ ಇರುವುದಿಲ್ಲವೆಂದು ಸೂಚಿಸುತ್ತದೆ. ಮಾನವನ ದೇಹ, ಮನಸ್ಸು ಮತ್ತು ಉಸಿರು ಪ್ರತ್ಯೇಕಪಡಿಸಲಾಗದ ಅವಿಭಾಜಿತ ಘಟಕವಾಗಿದೆ. ವ್ಯಕ್ತಿಯು ಮರಣ ಹೊಂದಿದಾಗ ಅವನ ಅಸ್ತಿತ್ವವು ಇಲ್ಲದೆ ಹೋಗುತ್ತದೆ ಮತ್ತು ಪುನರುತ್ಥಾನವಾಗುವವರೆಗೆ ಪ್ರಜ್ಞೆಯಿಲ್ಲದ ಸ್ಥಿತಿಯಲ್ಲಿರುತ್ತಾನೆ. ಎರಡನೆಯದು ಪುನರುತ್ಥಾನವು ಪಾಪದ ಪರಿಣಾಮದಿಂದ ಏನಾಯ್ತೋ ಅದಕ್ಕೆ ಸಂಪೂರ್ಣವಾಗಿ ವ್ಯತಿರಿಕ್ತವಾದುದಾಗಿದೆ ಎಂಬುದನ್ನು ವಚನವು ಸೂಚಿಸುತ್ತದೆ. ಹೌದು ಉಕ್ತಿಯು ಧೂಳಿನ ನೆಲದೊಳಗೆ ಎಂಬುದಾಗಿ ಮೂಲಭಾಷೆಯಲ್ಲಿದ್ದ ನೆಲದ ಧೂಳು ಎಂದು ಅನುವಾದಗೊಂಡಿದೆ (ದಾನಿ 12:2). ಒಂದು ಅಸಮಾನ್ಯ ಪದಸರಣಿಯು ಹಿಂದಕ್ಕೆ ಆದಿಕಾಂಡ 3:19ಕ್ಕೆ ಬೊಟ್ಟು ಮಾಡಿತೋರಿಸುತ್ತದೆ. ಇದು ಸತ್ಯವೇದದಲ್ಲಿ ಇನ್ನೊಂದೇ ಒಂದು ಸ್ಥಳದಲ್ಲಿ ಸಿಗುತ್ತದೆ. ಇದರಲ್ಲಿ ನೆಲದ ಜೊತೆಗೆ ಧೂಳು ಎಂಬ ಪದ ಕಾಣಿಸಿಕೊಳ್ಳುತ್ತದೆ. ಇದು ಆದಾಮನು ಪಾಪದಲ್ಲಿ ಬಿದ್ದಾಗ ವಿಧಿಸಿದ ಮರಣಶಿಕ್ಷೆಗೆ ಹಿಮ್ಮುಖ ಪರಿಣಾಮದಿಂದ ಮರಣ ಎಂದೆಂದಿಗೂ

ಅಧಿಕಾರ ನಡೆಸಲಾರದಂತಾಗುತ್ತದೆ. ಪೌಲನು ಹೇಳುವಂತೆ "ಮರಣವು ನುಂಗಿಯೇ ಹೋಯಿತು ಜಯವಾಯಿತು" (1 ಕೊರಿಂಥ 15:54).

ಓದಿರಿ : ರೋಮ 8:18 ಮತ್ತು ಇಬ್ರಿಯ 2:14,15 ಯಾವಕಾರಣಕ್ಕಾಗಿ ನಾವು ಸಾವಿಗೆ ಅಂಜಿಕೊಳ್ಳುವ ಅಗತ್ಯವಿಲ್ಲ?

ಮರಣವು ನಾಶಕರವಾಗಿದ್ದು ಇಲ್ಲಿರುವುದೆಲ್ಲವನ್ನೂ ಅಂತ್ಯಗೊಳಿಸುತ್ತದೆ. ಆದರೆ ನಂಬಿಕಸ್ಥ ವಿಶ್ವಾಸಿಗಳ ಮೇಲೆ ಸಾವು ತನ್ನ ಜಯವನ್ನು ಸಾಧಿಸಲಾಗದೆಂಬ ವಾಗ್ದಾನವು ನಮಗೆ ಕೊಡಲ್ಪಟ್ಟಿದೆ. ಮರಣವು ಸೋತು ಇಲ್ಲದಂತಾಗುತ್ತದೆ. ಯೇಸುಕ್ರಿಸ್ತನು ಮರಣದ ಕೊಂಡಿಯನ್ನು ಮುರಿದು ಸಮಾಧಿಯಿಂದ ಮೇಲೆದ್ದು ಪುನರುತ್ಥಾನ ಮರಣಕ್ಕೆ ಮರಣಕರವಾದ ಪೆಟ್ಟನ್ನು ನೀಡಿದ್ದಾನೆ. ನಾವು ಈವಾಗ ತಾತ್ಕಾಲಿಕವಾದ ಮರಣದ ವಾಸ್ತವದಾಚೆಗೆ ನೋಡುವವರಾಗಿದ್ದು ಅಂತಿಮವಾಗಿ ಜೀವದ ಅಂತಿಮವಾಸ್ತವವನ್ನು ನಾವು ದೇವರಿಂದ ಯೇಸುಕ್ರಿಸ್ತನಲ್ಲಿ ಪಡೆಯುತ್ತೇವೆ. ಯಾಕೆಂದರೆ "ಮೀಕಾಯೇಲನು ಏಳುತ್ತಾನೆ" (ದಾನಿ 12:1ನ್ನು ನೋಡಿರಿ). ಆತನಿಗೆಸೇರಿದವರೂ ಸಹಾ ನಿಲ್ಲುತ್ತಾರೆ. ಅವರು ಧೂಳಿನ ನೆಲದಿಂದ ಎದ್ದು ಎಂದೆಂದಿಗೂ ನಕ್ಷತ್ರಗಳಂತೆ ಪ್ರಕಾಶಿಸುತ್ತಾರೆ.

ಜೀವನದ ನೋವು ಮತ್ತು ಹೋರಾಟಗಳ ನಡುವೆ ನಾವು ಕಡೆಯಲ್ಲಿ ಪುನರುತ್ಥಾನ ಹೊಂದುತ್ತೇವೆಂಬ ವಾಗ್ದಾನದಿಂದ ನಿರೀಕ್ಷೆಯನ್ನು ಆದರಣೆಯನ್ನೂ ಪಡೆಯುವುದು ಹೇಗೆ? ನಿಜವಾದ ಅರ್ಥದಲ್ಲಿ ಬೇರೆ ಮತ್ತ್ಯಾವುದೂ ಮುಖ್ಯವಲ್ಲ ಏಕೆ?

**ಬುಧವಾರ** **ಮಾರ್ಚ್ 25**

## ಮುದ್ರೆಹಾಕಿದ ಗ್ರಂಥ

ಓದಿರಿ : ದಾನಿಯೇಲ 12:4 ಮತ್ತು ಯೋಹಾನ 14:29, ದಾನಿಯೇಲನ ಗ್ರಂಥವು ಅಂತ್ಯಕಾಲದವರೆಗೆ ಮುದ್ರೆ ಹಾಕಲ್ಪಡಬೇಕು ಏಕೆ?

ಪುಸ್ತಕದ ಕಡೆಯ ಮುಖ್ಯಭಾಗದ ಮುಕ್ತಾಯದಲ್ಲಿ (ದಾನಿ 10:1–12:4). ಅದಕ್ಕೆ ಅಂತ್ಯಕಾಲದವರೆಗೆ ಮುದ್ರೆ ಹಾಕಬೇಕೆಂದು ಆಜ್ಞೆಯನ್ನು ಪ್ರವಾದಿಯು

ಪಡೆದನು. ಅದೇ ಉಸಿರಿನಲ್ಲಿ ದೂತನು ಹೀಗೆ ಮುನ್ನಡೆಯುತ್ತಾನೆ. "ಬಹುಜನರು ಅತ್ತಿತ್ತ ತಿರುಗುವರು, ತಿಳುವಳಿಕೆಯು ಹೆಚ್ಚುವುದು" (ದಾನಿ 12:4).

ದಾನಿಯೇಲ ಪುಸ್ತಕದ ಕೆಲವು ವಿದ್ಯಾರ್ಥಿಗಳು ಈ ವಾಕ್ಯವನ್ನು ವೈಜ್ಞಾನಿಕ ಏಳಿಗೆಯ ವಿಷಯದಲ್ಲಿ ನುಡಿದ ಭವಿಷ್ಯವೆಂದು ಅಭಿಪ್ರಾಯ ಪಡುತ್ತರಾದರೂ, ಈ ಸಂದರ್ಭದಲ್ಲಿ ಅತ್ತಿತ್ತ ತಿರುಗಾಡುವರು ಎಂಬುದು ದಾನಿಯೇಲನ ಪುಸ್ತಕವನ್ನು ಹುಡುಕುವುದಕ್ಕೆ ಅನ್ವಯವಾಗುತ್ತದೆ. ನಿಜ, ನಾವು ಚರಿತ್ರೆಯನ್ನು ಹಿಂದಿರುಗಿ ನೋಡಿದಾಗ ದಾನಿಯೇಲನ ಪುಸ್ತಕವು ಅನೇಕ ಶತಮಾನಗಳವರೆಗೆ ಅಜ್ಞಾತವಾಗಿ ಉಳಿದ ಸಾಹಿತ್ಯಭಾಗವಾಗಿತ್ತು. ಕೆಲವು ಸ್ಥಳಗಳಲ್ಲಿ ಅದು ಗೊತ್ತಾಗಿರಲು ಬಹುದು ಓದಿರಲೂಬಹುದು ಆದರೆ ಅದರ ಮುಖ್ಯಬೋಧನೆಗಳು ಮತ್ತು ಪ್ರವಾದನೆಗಳು ರಹಸ್ಯವಾಗುಳಿದಿದ್ದವು. ಉದಾಹರಣೆಗೆ ದೇವದರ್ಶನ ಗುಡಾರದ ಶುದ್ಧೀಕರಣೆ, ಚಿಕಕ್ಕೊಂಬಿನ ಕೆಲಸ ನ್ಯಾಯವಿಚಾರಣೆಯ ಇವುಗಳಿಗೆ ಸಂಬಂಧಪಟ್ಟು ಪ್ರವಾದನೆಯ ಸಂದೇಶಗಳು ಮತ್ತು ಅವುಗಳ ಕಾಲಮಾನವು ಸ್ಪಷ್ಟವಾಗಿರಲಿಲ್ಲ. ಆದರೆ ಪ್ರೊಟೆಸ್ಟೆಂಟ್ ಸುಧಾರಣೆಯ ನಂತರ ಹೆಚ್ಚು ಜನರು ದಾನಿಯೇಲನ ಪುಸ್ತಕವನ್ನು ಅಧ್ಯಯನ ಮಾಡತೊಡಗಿದರು. ಆದಾಗ್ಯೂ ಅಂತ್ಯಕಾಲದ ಆರಂಭದಲ್ಲಿ ಈ ಪುಸ್ತಕವು ಅಂತಿಮವಾಗಿ ತೆರೆಯಲ್ಪಟ್ಟು ಅದರಲ್ಲಿರುವ ವಿಷಯಗಳು ಅನಾವರಣಗೊಂಡವು. ಎಲೆನ್ ಜಿ ವೈಟಮ್ಮನವರು ಹೀಗೆ ಬರೆಯುತ್ತಾರೆ", ಕ್ರಿ.ಶ. 1798 ರಿಂದ ದಾನಿಯೇಲನ ಪುಸ್ತಕವು ತೆರೆಯಲ್ಪಟ್ಟಿತು. ಪ್ರವಾದನೆ ಜ್ಞಾನವು ಹೆಚ್ಚಿತ್ತು ಮತ್ತು ಅನೇಕರು ನ್ಯಾಯವಿಚಾರಣೆಯ ಬಗ್ಗೆ ಗಂಭೀರವಾದ ಸಂದೇಶಗಳನ್ನು ಸಾರಿದರು"– ಮಹಾಹೋರಾಟ ಪು. 356. "18ನೇ ಶತಮಾನದ ಅಂತ್ಯದಲ್ಲಿ ಮತ್ತು 19ನೇ ಶತಮಾನದ ಆರಂಭದಲ್ಲಿ ದಾನಿಯೇಲ ಮತ್ತು ಪ್ರಕಟನೆ ಪುಸ್ತಕಗಳಲ್ಲಿರುವ ಪ್ರವಾದನೆಗಳ ಮೇಲಿನ ಹೊಸ ಆಸಕ್ತಿಯು ಭೂಮಿಯ ಮೇಲೆ ವಿಸ್ತಾರವಾಗಿ ಬೇರೆ ಬೇರೆ ಸ್ಥಳಗಳಲ್ಲಿ ಹೆಚ್ಚಿತು (ಜಾಗೃತಗೊಂಡಿತು). ಈ ಪ್ರವಾದನೆಗಳ ಅಧ್ಯಯನವು ಯೇಸುಕ್ರಿಸ್ತನ ಎರಡನೆಯ ಬರೋಣವು ಹತ್ತಿವಾಯ್ತೆಂಬ ನಂಬಿಕೆಯನ್ನು ಎಲ್ಲಾ ಕಡೆ ಹರಡಿತು. ಇಂಗ್ಲೆಂಡ್‌ನ ಅನೇಕ ಪ್ರತಿಪಾದಕರು, ಮಧ್ಯಪೂರ್ವದ ಜೋಸೆಫ್ ಉಲ್ಫ್‌ದಕ್ಷಿಣ ಅಮೇರಿಕದ

ಮ್ಯಾನುಯಲ್ ಲಕುನ್‌ಝು, ಯುನೈಟೆಡ್ ಸ್ಟೇಟ್‌ನ ವಿಲಿಯಂ ಮಿಲರ್ ಮುಂತಾದವರ ಜೊತೆಗೆ ಪ್ರವಾದನೆಯ ವಿದ್ಯಾರ್ಥಿಗಳ ಸಮೂಹವು ತಮ್ಮ ಅಧ್ಯಯನದ ಆಧಾರದ ಮೇಲೆ ಎರಡನೆಯ ಬರೋಣ ಬಹಳ ಹತ್ತಿರದಲ್ಲಿದೆ ಎಂದು ಸಾರಿದರು. ಇಂದು ಈ ದೃಢನಿರ್ಣಯವು ಪ್ರಪಂಚದಾದ್ಯಂತ ನಡೆಯುತ್ತಿರುವ ಆಂದೋಲನಕ್ಕೆ ಚಾಲನಾಶಕ್ತಿಯಾಗಿದೆ".

ಸೆವೆಂತ್ ಡೇ ಅಡ್ವೆಂಟಿಸ್ಟ್ ಸತ್ಯವೇದ ವ್ಯಾಖ್ಯಾನ 4ನೇ ಸಂಪುಟ, ಪುಟ 879. ಇಂದು ಚರಿತ್ರೆಯ ಹಿಂದಕ್ಕೆ ನಮ್ಮ ದೃಷ್ಟಿಯನ್ನು ಹರಿಸುವ ಸಾಮರ್ಥ್ಯ ಉಳ್ಳವರಾಗಿ ಈ ಚಾರಿತ್ರಿಕ ಪ್ರವಾದನೆಗಳು ಹೇಗೆ ನೆರವೇರಿದವು ಎಂಬುದನ್ನು ನೋಡಿದವರಾಗಿ ನಮಗಿರುವ ದೊಡ್ಡ ಅನುಕೂಲತೆಯ ಬಗ್ಗೆ ಆಲೋಚಿಸೋಣ. ದೇವರ ಎಲ್ಲಾ ವಾಗ್ದಾನಗಳ ಮೇಲೆ ನಾವು ಭರವಸೆ ಇಡಲು ಇದು ಹೇಗೆ ಸಹಾಯ ಮಾಡುತ್ತದೆ?

**ಗುರುವಾರ** **ಮಾರ್ಚ್ 26**

## ಕಾಯುವ ಕಾಲ

ಓದಿರಿ : ದಾನಿಯೇಲ 12:5–13. ಪುಸ್ತಕವು ಹೇಗೆ ಮುಕ್ತಾಯವಾಗುತ್ತದೆ?

ಆಸಕ್ತಿಕರವಾಗಿ, ಈ ಕೊನೆಯ ದೃಶ್ಯವು ಟೈಗ್ರಿಸ್ ನದಿಯ ದಡದ ಮೇಲೆ ನಡೆಯಿತು, ಇದು ದಾನಿಯೇಲನು ಕಂಡ ಕೊನೆಯ ಪ್ರಮುಖ ದರ್ಶನವಾಗಿದೆ (ದಾನಿ 10:4). ಆದಾಗ್ಯೂ ಇಲ್ಲಿ ನದಿಗೆ ಉಪಯೋಗಿಸಿರುವ ಪದವು ಇಬ್ರಿಯ ಭಾಷೆಯಲ್ಲಿ ಸಾಮಾನ್ಯವಾಗಿ ಉಪಯೋಗಿಸುವ ಪದವಲ್ಲ. ಆದರೆ ಇದು ಸಾಮಾನ್ಯವಾಗಿ 'ನೈಲ್ ನದಿಗೆ' ಬಳಸಿದ ಪದವಾಗಿದೆ, ಇದು ವಿಮೋಚನಕಾಂಡವನ್ನು ನೆನಪಿಗೆ ತರುತ್ತದೆ ಮತ್ತು ಕರ್ತನು ಇಸ್ರಾಯೇಲ್ಯರನ್ನು ಐಗುಪ್ತದಿಂದ ವಿಮೋಚಿಸಿದಂತೆ ಅಂತ್ಯಕಾಲದ ತನ್ನ ಜನರನ್ನು ವಿಮೋಚಿಸುತ್ತಾನೆ.

ಮೂರು ಪ್ರವಾದನಾತ್ಮಕ ವೇಳಾಪಟ್ಟಿಗಳು ಕೊಡಲ್ಪಟ್ಟಿವೆ. ಮೊದಲನೆಯದು– ಒಂದು ಕಾಲ, ಎರಡು ಕಾಲ ಮತ್ತು ಅರ್ಧಕಾಲ. ಈ ಅಪೂರ್ವಕಾರ್ಯಗಳು ಕೊನೆಗಾಣುವುದಕ್ಕೆ ಎಷ್ಟು ಕಾಲ ಹಿಡಿಯುವುದು ಎಂಬ ಪ್ರಶ್ನೆಗೆ ಉತ್ತರ ನೀಡುತ್ತದೆ (ದಾನಿ 12:6). ಇಲ್ಲಿ ಹೇಳಿರುವ ಅಪೂರ್ವಕಾರ್ಯಗಳು ಎಂಬುದು

ದಾನಿಯೇಲ 11ನೇ ಅಧ್ಯಾಯದ ದರ್ಶನದಲ್ಲಿ ವರ್ಣಿಸಿರುವ ವಿಷಯಗಳಿಗೆ ಅನ್ವಯಿಸುತ್ತದೆ ಮತ್ತು ಇದು ದಾನಿಯೇಲ 7 ಹಾಗೂ 8ನೇ ಅಧ್ಯಾಯಗಳ ಸವಿಸ್ತಾರವಾಗಿದೆ.

ಇತರ ಎರಡು ಕಾಲಾವಧಿಗಳು : 1290 ಮತ್ತು 1335 ವರುಷಗಳು ಇದು ಎನ್ನೊಡೆಯನೇ, ಈ ಕಾರ್ಯಗಳ ಪರಿಣಾಮವೇನು? ಎಂದು ಮೋಶೆಯು ಈ ಕಾಲಾವಧಿಯು ನಿರ್ದಿಷ್ಟವಾಗಿ ದಾನಿಯೇಲ 7:25 ರಲ್ಲಿ ಮತ್ತು ಪ್ರಕಟನೆ 11:3; 12:6,14 ಹಾಗೂ 13:5 ರಲ್ಲಿ ಪ್ರಸ್ತಾಪಿಸಲಾಗಿದೆ. ಇದು ಪೋಪುಶಾಹಿಯ ಪ್ರಾಬಲ್ಯದ 1260 ವರ್ಷಗಳಾಗಿದ್ದು, ಕ್ರಿ.ಶ. 538ರಿಂದ ಕ್ರಿ.ಶ. 1798 ರವರೆಗೆ ಅವಧಿಯಾಗಿದೆ. ಮತ್ತು ದಾನಿಯೇಲ 11:32–35 ಇದೇ ಹಿಂಸೆಯನ್ನು ಅವಧಿ ರಹಿತವಾಗಿ ಪ್ರಸ್ತಾಪಿಸುತ್ತದೆ.

1290 ವರ್ಷಗಳು ಮತ್ತು 1335 ವರ್ಷಗಳು ಇತರ ಎರಡು ಕಾಲಾವಧಿಗಳಾಗಿವೆ. "ಎನ್ನೊಡೆಯನೇ, ಈ ಕಾರ್ಯಗಳ ಪರಿಣಾಮವೇನು ಎಂದು ದಾನಿಯೇಲನು ಕೇಳಿದ ಪ್ರಶ್ನೆಗೆ ಉತ್ತರವಾಗಿದೆ. ಇವೆರಡೂ ಅವಧಿಯ ಆರಂಭವು ನಿತ್ಯಹೋಮವು ನೀಗಿಸಲ್ಪಟ್ಟು ಹಾಳು ಮಾಡುವ ಅಸಹ್ಯವಸ್ತುವು ಪ್ರತಿಷ್ಠಿತವಾದಾಗ ಆಗುತ್ತದೆ. ದಾನಿಯೇಲ 8ನೇ ಅಧ್ಯಾಯವನ್ನೊಳಗೊಂಡಿರುವ ಪಾಠದಲ್ಲಿ ನಿತ್ಯಹೋಮವು ಯೇಸುಕ್ರಿಸ್ತನ ನಿರಂತರ ಮಧ್ಯಸ್ತಿಕೆಗೆ ಸೂಚಿತವಾಗಿದ್ದು, ಇದನ್ನು ವ್ಯತಿರಿಕ್ತವಾದ ಆರಾಧನಾ ಕ್ರಮವು ಪಲ್ಲಟಗೊಳಿಸುತ್ತದೆಯೆಂದು ನಾವು ಕಲಿತಿದ್ದೇವೆ. ಈ ಪ್ರವಾದನಾತ್ಮಕ ಅವಧಿಯು ಕ್ರಿ.ಶ. 508ರಲ್ಲಿ ಫ್ರಾಂಕ್ ದೇಶದ ದೊರೆ ಕ್ಲೋವಿಸ್ತನು ಕಥೋಲಿಕ ವಿಶ್ವಾಸಕ್ಕೆ ಪರಿವರ್ತನೆ (ಮತಾಂತರ) ಯಾದಾಗಿನಿಂದ ಆರಂಭಗೊಳ್ಳುತ್ತದೆ. ರಾಜ್ಯವು ಸಭೆಯೊಂದಿಗೆ ಒಂದಾಗುವುದಕ್ಕೆ ದಾರಿ ಮಾಡಿಕೊಡಲಾಗಿ ಚರಿತ್ರೆಯ ಮಧ್ಯಕಾಲದ ಪರ್ಯಂತ ಸರ್ವಾಧಿಕಾರ ನಡೆಸಿತು. ಆದ್ದರಿಂದ 1290 ದಿನಗಳು ಕ್ರಿ.ಶ. 1798ರಲ್ಲಿ ಫ್ರೆಂಚ್ ಚಕ್ರವರ್ತಿ ನೆಪೋಲಿಯನ್ನನು ಸೆರೆಹಿಡಿದಾಗ ಪೂರ್ಣಗೊಂಡಿತು. ಪೋಪನನ್ನು ಮತ್ತು ದಾನಿಯೇಲ 8ನೇ ಅಧ್ಯಾಯದಲ್ಲಿ ನಮೂದಾಗಿರುವ ಕಡೆಯ ಪ್ರವಾದನಾತ್ಮಕ ಅವಧಿ 1335 ದಿನಗಳು, ಇದು ಕ್ರಿ.ಶ. 1843ಕ್ಕೆ ಪೂರ್ಣಗೊಳ್ಳುತ್ತದೆ. ಈ ಅವಧಿಯು

ತಾನೆ ಮಿಲ್ಲರ್ ಆಂದೋಲನದ ಮತ್ತು ಸತ್ಯವೇದಾತ್ಮಕ ಪ್ರವಾದನೆಗಳ ನವೀಕರಿಸಿದ ಅಧ್ಯಯನ ಕಾಲವಾಗಿತ್ತು. ಇದು ಯೇಸುಕ್ರಿಸ್ತನ ಶೀಘ್ರಬರೋಣವನ್ನು ನಿರೀಕ್ಷಿಸಿಕೊಂಡು ಕಾಯುವಂತಹ ಕಾಲವಾಗಿತ್ತು.

ದಾನಿಯೇಲನ ಪುಸ್ತಕದ ಪರ್ಯಂತ ಎರಡು ವಿಷಯಗಳನ್ನು ನೋಡುತ್ತೇವೆ. ದೇವಜನರು ಹಿಂಸೆಗೊಳಗಾಗುವುದು ಮತ್ತು ದೇವಜನರು ಅಂತಿಮವಾಗಿ ಸಮರ್ಥಿಸಲ್ಪಟ್ಟು ರಕ್ಷಣೆ ಹೊಂದುವುದು.

ನಮ್ಮ ಮುಂದಿರುವ ಶೋಧನೆಗಳನ್ನು ಲೆಕ್ಕಿಸದೆ ನಂಬಿಗಸ್ತರಾಗಿ ಉಳಿಯುವುದಕ್ಕೆ ಈ ವಾಸ್ತವವು ನಮಗೆ ಹೇಗೆ ಸಹಾಯ ಮಾಡುತ್ತದೆ?

**ಶುಕ್ರವಾರ** **ಮಾರ್ಚ್ 27**

**ಹೆಚ್ಚಿನ ಚಿಂತನೆಗೆ :** ಘಟನೆಗಳು ಅನುಕ್ರಮವಾಗಿ ನ್ಯಾಯವಿಚಾರಣೆಯು ತೆರೆದುಕೊಳ್ಳುವವರೆಗೆ ನಡೆಸಿಕೊಂಡು ಹೋಗುವುದನ್ನು ಪ್ರವಾದನೆಗಳು ಮಂಡಿಸುತ್ತವೆ. ವಿಶೇಷವಾಗಿ ದಾನಿಯೇಲ ಪುಸ್ತಕದ ವಿಷಯದಲ್ಲಿ ಇದು ಸತ್ಯವಾದುದಾಗಿದೆ. ಆದರೆ ಕಡೆಯ ಕಾಲಕ್ಕೆ ಸಂಬಂಧಪಟ್ಟ ಪ್ರವಾದನೆಯ ಭಾಗವನ್ನು ಅಂತ್ಯಕಾಲದವರೆಗೆ ಮುಚ್ಚಿ ಮುದ್ರೆ ಹಾಕುವುದಕ್ಕೆ ದಾನಿಯೇಲನಿಗೆ ಅಪ್ಪಣೆಯಾಗುತ್ತದೆ. ಈ ಕಾಲವು ಬರುವವರೆಗೆ ಇತರ ಪ್ರವಾದನೆಗಳ ನೆರವೇರಿಕೆಯ ಆಧಾರದ ಮೇಲೆ ನ್ಯಾಯವಿಚಾರಣೆ ಕುರಿತ ಸಂದೇಶಗಳು ಸಾರಲ್ಪಡಲಿಲ್ಲ. ಆದರೆ ಅಂತ್ಯಕಾಲವು ಬಂದಾಗ "ಬಹುಜನರು ಅತ್ತಿತ್ತ ತಿರುಗುವರು, ತಿಳುವಳಿಕೆಯು ಹೆಚ್ಚುವುದು" ಎಂದು ದೂತನು ದಾನಿಯೇಲನಿಗೆ ಹೇಳಿದನು" (ದಾನಿಯೇಲ 12:4).

"ಅಪೊಸ್ತಲನಾದ ಪೌಲನು ಸಭೆಗೆ ಎಚ್ಚರಿಕೆಕೊಟ್ಟು ಆತನ ದಿನಗಳಲ್ಲಿ ಕ್ರಿಸ್ತನ ಬರೋಣವನ್ನು ಎದುರು ನೋಡಬಾರದೆಂದು ಹೇಳಿದನು. ಮೊದಲು ಭ್ರಷ್ಟತೆ ಉಂಟಾಗಿ ಅಧರ್ಮಸ್ವರೂಪನು ಬೈಲಿಗೆ ಬಂದ ಹೊರತು ಆ ದಿನವು ಬರುವುದಿಲ್ಲವೆಂದು ಪೌಲನು ಹೇಳುತ್ತಾನೆ (2 ಥೆಸ 2:3). ಧರ್ಮಭ್ರಷ್ಟತೆ ಉಂಟಾಗದೆ ಅಧರ್ಮಸ್ವರೂಪನು ದೀರ್ಘಕಾಲ ಆಳ್ವಿಕೆ ಮಾಡದೆ ಇರುವ ಮುಂಚೆಯೇ ಯೇಸುಕ್ರಿಸ್ತನ ಬರೋಣವನ್ನು ಎದುರು ನೋಡುವುದಕ್ಕಾಗುವುದಿಲ್ಲ.

ಅಧರ್ಮಸ್ವರೂಪನು, ನಾಶಕ್ಕೆ ಗುರಿಯಾದವನು, ಗುಪ್ತವಾದ ಅಧರ್ಮತೆ, ದುಷ್ಟನು ಎಂಬ ಈ ಪದಗಳು ಪೋಪುಶಾಹಿಯನ್ನು ಪ್ರತಿನಿಧಿಸುತ್ತದೆ. ಪ್ರವಾದನೆಯಲ್ಲಿ ಮುಂತಿಳಿಸಿರುವಂತೆ 1260 ವರ್ಷಗಳ ಕಾಲ ಇದರ ಪ್ರಾಬಲ್ಯವನ್ನು ಹೊಂದಿರಬೇಕು. ಈ ಅವಧಿಯು ಕ್ರಿ.ಶ. 1798ಕ್ಕೆ ಪೂರ್ಣಗೊಂಡಿತು. ಅದಕ್ಕಿಂತಲೂ ಮೊದಲು ಯೇಸುಕ್ರಿಸ್ತನ ಬರೋಣವು ಸಂಭವಿಸುವುದಕ್ಕೆ ಸಾಧ್ಯವಿರಲಿಲ್ಲ. ಪೌಲನು 1798ರವರೆಗೆ ತನ್ನ ಎಚ್ಚರಿಕೆಯನ್ನು ಪೌಲನು ಕೊಡುವ ಎಚ್ಚರಿಕೆಯು ಕ್ರಿ.ಶ. 1798 ರವರೆಗೆ ಬರುವ ಎಲ್ಲಾ ಕ್ರೈಸ್ತರಿಗೂ ಅನ್ವಯವಾಗುತ್ತದೆ. ಆಕಾಲದ ನಂತರ ಬರುವ ಕ್ರೈಸ್ತರಿಗೆ ಯೇಸುಕ್ರಿಸ್ತನ ಎರಡನೆ ಬರೋಣದ ಸಂದೇಶಗಳನ್ನು ಸಾರಬೇಕಾಗಿದೆ" ಎಲೆನ್ ಜಿ ವೈಟಮ್ಮನವರ, ಮಹಾಹೋರಾಟ ಪುಟ 356.

## ಚರ್ಚಿಸಬೇಕಾದ ಪ್ರಶ್ನೆಗಳು

1. ಭವಿಷ್ಯದಲ್ಲಿ ಸಂಭವಿಸುವ ಅಂತ್ಯಕಾಲದ ಘಟನೆಗಳ ದಿನಾಂಕಗಳನ್ನು ನಿರ್ಧರಿಸುವಾಗ ಎಂಥಾ ಅಪಾಯಗಳನ್ನು ನಾವು ಎದುರಿಸಬೇಕಾಗುತ್ತದೆ? ನಡೆಯುತ್ತದೆಯೆಂದು ನಂಬಿಕೊಂಡಿದ್ದ ಘಟನೆಗಳ ನಡೆಯದೆ ಹೋದಾಗ ನಮ್ಮ ನಂಬಿಕೆ ಏನಾಗುತ್ತದೆ? ಪ್ರವಾದನಾ ವಿಷಯಕ್ಕೆ ಸಂಬಂಧಿಸಿದಂತೆ ನಿರ್ಣಯಾತ್ಮಕವಾದ ಯಾವ ತತ್ವವು ಯೇಸುಕ್ರಿಸ್ತನ ಮಾತಿನಲ್ಲಿ (ಯೋಹಾನ 14:29) ಸಿಗುತ್ತದೆ. ಇದು ನಮ್ಮನ್ನು ಹುಸಿ ಭವಿಷ್ಯವನ್ನು ನಂಬಿಕೊಳ್ಳದ ಹಾಗೆ ಮಾಡಿ ನಮ್ಮ ಆತ್ಮೀಕ ಜೀವನಕ್ಕೆ ಲಾಭ ಮಾಡಿಕೊಳ್ಳಲು ಬೇಕಾದ ತಿಳುವಳಿಕೆ ಹೊಂದಲು ಸಹಾಯ ಮಾಡುತ್ತದೆ ಹೇಗೆ?

2. ನಾವು ಜೀವಿಸುತ್ತಿರುವ ಈಗಿನ ಕಾಲವನ್ನು ನೋಡಿರಿ! ಕೂಡಲೇ ಒದಗುವ ಸಂಪರ್ಕಗಳು ನಮಗೆ ಯಾವಾಗಲೂ ಒಳ್ಳೆಯದನ್ನೇ ಮಾಡುತ್ತವೆಯೆಂದು ಹೇಳಲಿಕ್ಕಾಗದ ವಿಸ್ಮಯಕಾರಿ ವೈಜ್ಞಾನಿಕ ಪ್ರಗತಿಗಳು ನಾವು ಕಲ್ಪಿಸಿಕೊಳ್ಳಲಾಗದಂತಹ, ಹಿಂದೆ ಎಂದು ಸಂಭವಿಸಿದಂತಹ ಕಷ್ಟಸಂಕಟಗಳು. ಇದು ಹೀಗೇಕೆ?

3. ಜೀವಬಾಧ್ಯರ ಪುಸ್ತಕದಲ್ಲಿ ನಮ್ಮ ಹೆಸರುಗಳು ಸಿಕ್ಕುವುದಕ್ಕೆ ಮಹಾಸತ್ಯವಾದ ಯೇಸುಕ್ರಿಸ್ತನ ನೀತಿಯಾದ ಸುವಾರ್ತೆಯು ನಮಗೆ ಏಕಮಾತ್ರವಾದ ನಿರೀಕ್ಷೆಯಾಗಿದೆ. ಇದರ ಬಗ್ಗೆ ಇರುವ ಸೋಮವಾರ ಪಾಠದ ಕಡೆಯ ಪ್ರಶ್ನೆಗೆ ನಿಮ್ಮ ಉತ್ತರಗಳನ್ನು ಚರ್ಚಿಸಿರಿ? ಇದಿಲ್ಲದೆ ಹೋದರೆ ಮತ್ತ್ಯಾವ ನಿರೀಕ್ಷೆ ನಮಗಿರಲು ಸಾಧ್ಯ?